ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಪೂರ.

ಸಿ.ಸಿ. ನಂಃ 272/2020

ಫಿರ್ಯಾಧಿಕಾರಃ ಕರ್ನಾಟಕ ಸರ್ಕಾರದ ಪರವಾಗಿ ಶಹಾಪೂರ ಪೊಲೀಸಠಾಣೆ

// ವಿರುದ್ಧ //

ಆರೋಪಿಗಳು ಃ ಹಣಮಂತ.

## ದೋಷಾರೋಪಣೆ

ನಾನು ಶ್ರೀ. ಬಸವರಾಜ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು, ಶಹಾಪೂರ,

ಆರೋಪಿ.

ಹಣಮಂತ ತಂದೆ ಭೀಮಣ್ಣ ಸುರಪೂರ, ವಯಸ್ಸುಃ 35 ವರ್ಷ, ಉದ್ಯೋಗಃ ಕುರಿ ಕಾಯುವದು ಮತ್ತು ಒಕ್ಕಲುತನ, ಸಾಃ ಶೆಟ್ಟಿಕೇರಾ, ತಾಃ ಶಹಾಪೂರ, ಜಿಃ ಯಾದಗಿರಿ.

ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕಃ 30-09-2019 ರಂದು 04-00 ಪಿ.ಎಂ. ಸುಮಾರಿಗೆ ಗೋಗಿ ಪೊಲೀಸಠಾಣಾ ವ್ಯಾಪ್ತಿಯಲ್ಲಿ ಬರುವ ಶಟ್ಟಿಕೇರಾ ಗ್ರಾಮದ ಸೀಮಾಂತರದಲ್ಲಿ ಭೀರಲಿಂಗ ಜೋಗಿನ ಇವರ ಹೊಲದ ಹತ್ತಿರ ಕೆನಾಲ ದಾರಿಯಲ್ಲಿ ಚಾಸಾ-1 ರವರು ತಮ್ಮ ಕುರಿಗಳನ್ನು ಮೇಯಿಸುತ್ತಾ ಇದ್ದಾಗ ಆರೋಪಿಯಾದ ನೀನು ಕೂಡ ನಿನ್ನ ಕುರಿಗಳನ್ನು ಮೇಯಿಸುತ್ತಾ ಭೀರಲಿಂಗ ತಂದೆ ಹಣಮಂತ ಜೋಗಿನವರ ಹೊಲದಲ್ಲಿ ಕುರಿಳನ್ನು ಬಿಟ್ಟಿದ್ದು, ಆಗ ಚಾಸಾ-1 ರವರು ಏ ಮಾಮ ಮೋನ್ನೆ ನಿಮ್ಮ ಹೊಲದಲ್ಲಿ ನನ್ನ ಕುರಿಗಳನ್ನು ಓಡಿ ಬಂದಿದ್ದವು ಅದಕ್ಕೆ ಬೈಯ್ದಿದ್ದಿ ಅದಕ್ಕೆ ನೀನು ಬೇರೆಯವರ ಹೊಲದಲ್ಲಿ ಯಾಕೆ ಕುರಿ ಬಿಟ್ಟಿದಿ ಅಂತ ಕೇಳಿದಕ್ಕೆ ಆರೋಪಿಯಾದ ನೀನು ಅವಾಚ್ಯ ಶಬ್ದಗಳಿಂದೆ ಬೈದು ನಿನ್ನ ಕೈಯಲ್ಲಿ ಇದ್ದ ಕೊಡಲಿಯಿಂದ ಚಾಸಾ-1 ರವರ ತಲೆಗೆ ಹೊಡೆದು ತಲೆಯ ಎರಡು ಕಡೆಗೆ ರಕ್ತಗಾಯ ಮಾಡಿದ್ದು. ಈ ಮೂಲಕ ಭಾ.ದಂ.ಸಂ. ಕಲಂ 324 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯ ಹಾಗೂ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನೀನು ಚಾಸಾ-1 ರವರಿಗೆ ಸೂಳೆ ಮಗನೆ ನನಗೆ ಕೇಳಲಿಕ್ಕೆ ನೀನ್ಯಾರಲೇ ಬೋಸಡಿ ಮಗನೆ ಅಂತಾ ಅವಾಚ್ಯವಾಗಿ ಬೈದಿದ್ದು. ಈ ಮೂಲಕ ಭಾ.ದಂ.ಸಂ. ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಏಳನೇದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯ ಹಾಗೂ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನೀವು ಚಾಸಾ-1 ರವರಿಗೆ ಇನ್ನೊಮ್ಮೆ ನನ್ನ ತಂಟೆಗೆ ಬಂದರೆ ನಿನಗೆ ಖಲಾಸ್ ಮಾಡುತ್ತೇನೆ ಅಂತಾ ಜೀವ ಬೇದರಿಕೆ ಹಾಕಿದ್ದು. ಈ ಮೂಲಕ ಭಾ.ದಂ.ಸಂ. ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮತ್ತು ನಾನು ಈ ಮೇಲ್ಕಂಡ ಆರೋಪಗಳಿಗೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆ-1ಃ ಮೇಲೆ ಓದಿ ಹೇಳಿದ ಆಪಾದನೆ/ದೋಷಾರೋಪಣೆ ತಿಳಿಯಿತೆ ಅಥವಾ ಅರ್ಥವಾಯಿತೇ?
ಆರೋಪಿಯ ಉತ್ತರಃ ಅರ್ಥವಾಯಿತು

ಪ್ರಶ್ನೆ-2ಃ ನೀವು ತಪ್ಪೊಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?
ಆರೋಪಿಯ ಉತ್ತರಃ ವಿಚಾರಣೆ ಬೇಕು

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)

ದಿನಾಂಕಃ **24-08-2023**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಶಹಾಪೂರ

ಆರೋಪಿತರ ಸಹಿ